# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ವಾರ್ಡ್ ಸಂಖ್ಯೆ.27 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 21-09-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು*

ಹಾಜರಿದ್ದ ಅಧಿಕಾರಿಗಳು ಸದಸ್ಯರು,

1. ಶ್ರೀಮತಿ ಪಲ್ಲವಿ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು
2. ಶ್ರೀ ಶ್ರೀಕಾಂತ್.ಕೆ, ವಾರ್ಡ್‌ನ ಸಹಾಯಕ ಅಭಿಯಂತರರು, ಹಾಗು ಸದಸ್ಯ ಕಾರ್ಯದರ್ಶಿ
3. ಶ್ರೀ ಕುಮಾರ್, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ-27 ಬಾಣಸವಾಡಿ
4. ಡಾ॥ ರಾಚೇಲ್ ಡ್ಯಾನಿಯಲ್, ವೈದ್ಯರು
5. ಡಾ॥ ಧನ್ಯ ಕುಮಾರ್,
6. ಶ್ರೀ ವಿನಯ್ ಕುಮಾರ್ ಹೆನ್ನೂರು ಎ.ಇ. (ಎಲೆಕ್ಟ್ರಿಕಲ್)
7. ಶ್ರೀ ಸಂತೋಷ್ ನಾಯ್ಕ್, ಎಲ್.ಹೆಚ್. ಸ್ಥಳೀಯರು
8. ಶ್ರೀ ಕ್ರಿಸ್ಟೋಫರ್ ಕ್ರೂಜ್ ಸ್ಥಳೀಯರು, ಬಾಣಸವಾಡಿ
9. ಶ್ರೀ ಸಿ. ಮರಿಯಪ್ಪ, ಸ್ಥಳೀಯರು, ಬಾಣಸವಾಡಿ
10. ಶ್ರೀ ವಿ. ಕೋದಂಡರೆಡ್ಡಿ, ಮಾಜಿ ಸಚಿವರು
11. ಶ್ರೀ ಎ. ರಾಯಪ್ಪ ಹಿರಿಯ ಆರೋಗ್ಯ ಪರಿವೀಕ್ಷಕರು
12. ಶ್ರೀ ಶಂಕರಪ್ಪ, ಸ್ಥಳೀಯರು
13. ಶ್ರೀ ಕೆ. ಶಿವಯ್ಯ ಸ್ಥಳೀಯರು
14. ಶ್ರೀ ಜಗದೀಶ್ ಎಂ. ಸ್ಥಳೀಯರು
15. ಶ್ರೀ ಕೆ.ಜಿ. ರವಿ ಸ್ಥಳೀಯರು
16. ಶ್ರೀ ಜೂಡ್ ರಾಜೇಶ್ ಫೆನೆವೊ, ಸ್ಥಳೀಯರು
17. ಶ್ರೀ ಮನೀಶ್, ಸ್ಥಳೀಯರು
18. ಶ್ರೀ ಕೆ. ರವಿ ಶೇಖರ್ ಸ್ಥಳೀಯರು
19. ಶ್ರೀ ಶ್ರೀಧರ ಎಂ. ಸ್ಥಳೀಯರು
20. ಶ್ರೀ ಆನಂದ್ ಎಸ್. ಕಿರಿಯ ಆರೋಗ್ಯ ಪರಿವೀಕ್ಷಕರು
21. ಶ್ರೀಮತಿ ಜ್ಯೋತಿ, ಸ್ಥಳೀಯರು
22. ಶ್ರೀಮತಿ ಮಣಿಮೇಘಲ, ಸ್ಥಳೀಯರು
23. ಶ್ರೀ ಕರ್ನಲ್ ಕೆ.ಎನ್. ಘೋರ್ಪಡೆ, ಸ್ಥಳೀಯರು
24. ಶ್ರೀ ಕೆ.ಎಸ್. ರವೀಂದ್ರನಾಥ್, ಸ್ಥಳೀಯರು
25. ಸಿ.ಎಂ. ವೆಂಕಟೇಶ್ ಇನ್ಸ್‌ಪೆಕ್ಟರ್
26. ಶ್ರೀ ಉಪೇಂದ್ರ.ವಿ ಸ್ಥಳೀಯರು
27. ಶ್ರೀ ಪಿ. ಸದಾಶಿವನ್, ಸ್ಥಳೀಯರು ಹಾಗೂ ಸ್ಥಳೀಯರು

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

ಕಾಮಗಾರಿ ಇಲಾಖೆ:-

1) ಬಾಣಸವಾಡಿ ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆ, 2ಕೆ ಕ್ರಾಸ್, ಕಲ್ಯಾಣನಗರ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಉಂಟಾಗಿದ್ದು, ಇದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ರಸ್ತೆ ಗುಂಡಿಗಳು ಬಿದ್ದಿರುವ ರಸ್ತೆಗಳನ್ನು ಗುರುತಿಸಿ, ಕೂಡಲೇ ಗುಂಡಿ ಮುಚ್ಚಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಕಾರ್ಯದರ್ಶಿಯವರು ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಏಜೆನ್ಸಿಯನ್ನು ನೇಮಿಸಿದ್ದು, ಸದರಿಯವರಿಗೆ ಬಾಣಸವಾಡಿ ವಾರ್ಡ್ ವ್ಯಾಪ್ತಿಗೆ ಅವಶ್ಯಕವಿರುವ ಪ್ರಮಾಣವನ್ನು ಇಂಡೆಂಟ್ ಮೂಲಕ ಕೋರಿ, ರಸ್ತೆಗಳಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

2) ಬಾಣಸವಾಡಿ ವ್ಯಾಪ್ತಿಯ ಗ್ರೀನ್ ಪಾರ್ಕ್ ಹತ್ತಿರ ಕಲ್ವರ್ಟ್‌ಗಳು ಹಾಳಾಗಿದ್ದು, ಇದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಬೀಳುವ ಸಂಭವವಿದ್ದು, ಕೂಡಲೇ ಅದನ್ನು ಸರಿಪಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಸದರಿ ಪ್ರದೇಶದಲ್ಲಿ ಹಾಳಾಗಿರುವ ಕಲ್ವರ್ಟ್‌ಗಳನ್ನು ದುರಸ್ತಿಪಡಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸೂಚಿಸಿದರು.

3) ವಾರ್ಡ್ ವ್ಯಾಪ್ತಿಯ ಅನೇಕ ಕಡೆಗಳಲ್ಲಿ ಚರಂಡಿಯಲ್ಲಿ ಹೂಳು ತುಂಬಿದ್ದು ಹಾಗೂ ಕೆಲವು ಪ್ರದೇಶದ ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿರುವ ಮಣ್ಣನ್ನು ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಹಾಲೀ ಕಾರ್ಯನಿರ್ವಹಿಸುತ್ತಿದ್ದ ಸಿಲ್ಟ್ ಅಂಡ್ ಟ್ರಾಕ್ಟರ್ ಟೆಂಡರ್ ಅವಧಿ ಪೂರ್ಣಗೊಂಡಿದ್ದು, ಹೊಸದಾಗಿ ಶಿಲ್ಟ್ ಅಂಡ್ ಟ್ರಾಕ್ಟರ್ ಕಾಮಗಾರಿಯು ಟೆಂಡರ್ ಪ್ರಕ್ರಿಯೆ ಹಂತದಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

4) ಜೈ ಜವಾನ್ ನಗರ, ಬಾಣಸವಾಡಿಯಲ್ಲಿ ಪಾದಾಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಲು ಹಾಗೂ ಸದರಿ ಪ್ರದೇಶದಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ವಹಿಸಲು ಸಭೆಗೆ ತಿಳಿಸಿದರು.

5) ಬಾಣಸವಾಡಿ ವಾರ್ಡ್ ವ್ಯಾಪ್ತಿಯ 6ನೇ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಲ್ಲಿ ಚರಂಡಿಯಲ್ಲಿ ಹೂಳು ತುಂಬಿದ್ದು, ಚರಂಡಿ ನೀರು ರಸ್ತೆಗೆ ಹರಿಯುತ್ತಿರುವುದರಿಂದ ವಾಹನ ಸವಾರರಿಗೆ ತೊಂದರೆಯುಂಟಾಗುತ್ತಿದ್ದು, ಸದರಿ ಪ್ರದೇಶದ ಚರಂಡಿಯಲ್ಲಿ ಬಿದ್ದಿರುವ ಹೂಳನ್ನು ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸಭೆಗೆ ತಿಳಿಸಿದರು.

6) ಬಾಣಸವಾಡಿ ವ್ಯಾಪ್ತಿಯ 9ನೇ ಮುಖ್ಯರಸ್ತೆ, 10ನೇ ಮುಖ್ಯರಸ್ತೆ ಮತ್ತು 7ನೇ ಮುಖ್ಯರಸ್ತೆಗಳಲ್ಲಿ ಪಾದಾಚಾರಿ ಮಾರ್ಗಗಳಲ್ಲಿ ಪೆಟ್ಟಿ ಅಂಗಡಿಗಳನ್ನು ಇಟ್ಟುಕೊಂಡು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದು, ಇದರಿಂದ ಪಾದಾಚಾರಿ ಮಾರ್ಗದಲ್ಲಿ ಸಂಚರಿಸುವ ನಾಗರೀಕರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿ, ಕೂಡಲೇ ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲು ಪಾದಾಚಾರಿ ತೆರವು ಕಾರ್ಯಾಚರಣೆ ನಡೆಸಲು ಸಭೆಗೆ ತಿಳಿಸಿದರು.

7) 9ನೇ ಮುಖ್ಯರಸ್ತೆ, 2ಕೆ ಕ್ರಾಸ್‌ನಲ್ಲಿರುವ ಬೃಹತ್ ನೀರುಗಾಲುವೆ ಹತ್ತಿರ ಇರುವ ಸ್ಲಾಬ್ ಹಾಳಾಗಿದ್ದು, ಇದನ್ನು ಸರಿಪಡಿಸಲು ಸಭೆಗೆ ತಿಳಿಸಿದರು.

**ಬಿಡಬ್ಲೂಎಸ್‌ಎಸ್‌ಬಿ ಇಲಾಖೆ:-**

1) ಬಾಣಸವಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಕೆ.ಟಿ.ಎಂ ಶೋ ರೂಮ್ ಹತ್ತಿರ ಇರುವ ಮ್ಯಾನ್‌ಹೋಲ್ ಚೇಂಬರ್ ತುಂಬಿ ನೀರು ರಸ್ತೆಗೆ ಹರಿಯುತ್ತಿದ್ದು, ಇದರಿಂದ ಸ್ಥಳೀಯರಿಗೆ ತೊಂದರೆಯಾಗುತ್ತಿರುವುದಾಗಿ, ಇದನ್ನು ಕೂಡಲೇ ಸರಿಪಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಈ ಬಗ್ಗೆ ಬಿಡಬ್ಲೂಎಸ್‌ಎಸ್‌ಬಿ ಇಲಾಖೆಯವರೊಂದಿಗೆ ಮಾತನಾಡಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

2) ಬಾಣಸವಾಡಿ ವ್ಯಾಪ್ತಿಯ 9ನೇ ಮುಖ್ಯರಸ್ತೆಯಲ್ಲಿ ಹಾಲೀ ಇರುವ ಚರಂಡಿ ಪೈಪ್‌ಲೈನ್ ದುರಸ್ತಿಯಲ್ಲಿರುವುದರಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರಿಂದ ಆ ಪ್ರದೇಶದಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸಲು ಸಭೆಗೆ ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

3) ಬಾಣಸವಾಡಿ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರು ಪೈಪ್‌ಲೈನ್‌ಗಳನ್ನು ಅಳವಡಿಸಲು ರಸ್ತೆಯನ್ನು ಕತ್ತರಿಸಿದ್ದು, ಅಂತಹ ರಸ್ತೆಗಳನ್ನು ಸರಿಯಾಗಿ Restoration ಮಾಡದೇ ಇರುವುದರಿಂದ ರಸ್ತೆಗುಂಡಿಗಳು ಉಂಟಾಗಿದ್ದು, ಅಂತಹ ಸ್ಥಳಗಳಲ್ಲಿ ಅಪಘಾತಗಳಾಗುವ ಸಂಭವ ಇರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರಿಗೆ ಮಾಹಿತಿ ನೀಡಿ, ಕೂಡಲೇ ರಸ್ತೆ ಕತ್ತರಿಸಿರುವ ಭಾಗವನ್ನು ಸರಿಯಾಗಿ Restoration ಕ್ರಮ ವಹಿಸಲು ತಿಳಿಸಿದರು.

**ಬೃಹತ್ ನೀರುಗಾಲುವೆ:-**

1) ಬಾಣಸವಾಡಿ ವ್ಯಾಪ್ತಿಯ ಅಗ್ನಿಶಾಮಕ ಠಾಣೆ ಹಾಗೂ ಪಾರ್ಕ್ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಹೂಳು ತುಂಬಿದ್ದು, ಇದರಿಂದ ನೀರು ಸರಾಗವಾಗಿ ಹರಿಯದೇ ಒಂದೇ ಕಡೆ ಶೇಖರಣೆಯಾಗಿರುವುದರಿಂದ ವಾಸನೆ ಹಾಗೂ ಸೊಳ್ಳೆಗಳು ಹೆಚ್ಚಾಗಿದ್ದು, ಸಾರ್ವಜನಿಕರಿಗೆ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಈ ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದಾಗ, ಸದರಿ ಪ್ರದೇಶದಲ್ಲಿರುವ ಬೃಹತ್ ನೀರುಗಾಲುವೆಯ ನಿರ್ವಹಣೆ ಹಾಗೂ ಉಸ್ತುವಾರಿಯು ಮೇಜರ್ ರೋಡ್ ಇಲಾಖೆಗೆ ಬರುತ್ತಿದ್ದು, ಈ ಬಗ್ಗೆ ಸದರಿಯವರ ಗಮನಕ್ಕೆ ತಂದು ಬೃಹತ್ ನೀರುಗಾಲುವೆಯಲ್ಲಿ ಬಿದ್ದಿರುವ ಹೂಳನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ ಇಲಾಖೆ:-**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಮನೆ ಮನೆಗಳಿಂದ ಕಸ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯನಿರ್ವಹಿಸುತ್ತಿರುವ ಆಟೋ ಟಿಪ್ಪರ್ ಚಾಲಕರಿಗೆ ಹಾಗೂ ಪೌರಕಾರ್ಮಿಕರಿಗೆ ಸರಿಯಾಗಿ ಮನೆ ಮನೆಗಳಿಗೆ ಸಂಗ್ರಹಣೆ ಮಾಡಲು ಹಾಗೂ ವಾರ್ಡಿನ ನಾಗರೀಕರಿಗೆ ಆಟೋ ಬರುವ ಸಮಯ ಹಾಗೂ ಪ್ರತಿ ಮನೆಗಳಿಂದ ಕಸವನ್ನು ಸಂಗ್ರಹಿಸಲು ಕ್ರಮ ವಹಿಸಲು ಹಾಗೂ ಪ್ರತಿ ನಿತ್ಯ

ರಸ್ತೆಗಳನ್ನು ಗುಡಿಸುವ ಪೌರಕಾರ್ಮಿಕರು ಕೆಲಸ ನಿರ್ವಹಿಸಿದ ಪ್ರದೇಶದಿಂದ ಸ್ಥಳೀಯರ ಸಹಿ ಮಾಡಿಸಿ, ದೃಢೀಕರಿಸಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಬಗ್ಗೆ ಘನತ್ಯಾಜ್ಯ ನಿರ್ವಹಣೆ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಲು ಸೂಚಿಸಿದರು.

2. ಬಾಣಸವಾಡಿ ವ್ಯಾಪ್ತಿಯ 2ನೇ ಸಿ ಮತ್ತು 2ನೇ ಡಿ ಕ್ರಾಸ್‌ಗಳಲ್ಲಿರುವ ಕಸ ಹಾಗೂ ಇತರೆ ತ್ಯಾಜ್ಯವನ್ನು ಹಾಕುತ್ತಿದ್ದು, ಅಂತಹ ನಿವೇಶನದ ಮಾಲೀಕರಿಗೆ ಕೂಡಲೇ ತಮ್ಮ ತಮ್ಮ ನಿವೇಶನದಲ್ಲಿ ಹಾಕಿರುವ ಕಸ ಹಾಗೂ ಇತರೆ ತ್ಯಾಜ್ಯವನ್ನು ತೆರವುಗೊಳಿಸಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.

3. ಬಾಣಸವಾಡಿ ವಾರ್ಡ್ ವ್ಯಾಪ್ತಿಯ 6ನೇ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಲ್ಲಿರುವ ಖಾಲಿ ನಿವೇಶನಗಳಲ್ಲಿ ಬಿದ್ದಿರುವ ಕಸ ಹಾಗೂ ಇತರೆ ಕಟ್ಟಡದ ತ್ಯಾಜ್ಯವನ್ನು ತೆರವುಗೊಳಿಸಲು ನಿವೇಶನದ ಮಾಲೀಕರಿಗೆ ನೋಟೀಸ್ ನೀಡಿ, ತೆರವುಗೊಳಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿರುವ ಖಾಲಿ ನಿವೇಶನಗಳನ್ನು ಗುರುತಿಸಿ, ಅಂತಹ ನಿವೇಶನದ ಮಾಲೀಕರಿಗೆ ತಮ್ಮ ತಮ್ಮ ನಿವೇಶನದಲ್ಲಿ ಬಿದ್ದಿರುವ ಕಸ ಹಾಗೂ ಇತರೆ ತ್ಯಾಜ್ಯವನ್ನು ತೆರವುಗೊಳಿಸಲು ನೋಟೀಸ್ ಜಾರಿಗೊಳಿಸಲು ಘನತ್ಯಾಜ್ಯ ನಿರ್ವಹಣೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

4. 9ನೇ ಮುಖ್ಯರಸ್ತೆ, 2ಕೆ ಕ್ರಾಸ್‌ನಲ್ಲಿರುವ ಖಾಲಿ ನಿವೇಶನಗಳ ಅಕ್ಕಪಕ್ಕದ ನಿವಾಸಿಗಳು ಕಸ ಹಾಗೂ ಇತರೆ ತ್ಯಾಜ್ಯವನ್ನು ಹಾಕುತ್ತಿರುವುದು ಕಂಡುಬಂದಿದ್ದು, ಅಂತಹ ನಿವೇಶನದ ಮಾಲೀಕರಿಗೆ ಕೂಡಲೇ ತಮ್ಮ ತಮ್ಮ ನಿವೇಶನದಲ್ಲಿ ಹಾಕಿರುವ ಕಸ ಹಾಗೂ ಇತರೆ ತ್ಯಾಜ್ಯವನ್ನು ತೆರವುಗೊಳಿಸಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.

**ಬಾಣಸವಾಡಿ ಪೊಲೀಸ್ ಇಲಾಖೆ:-**

1. ಬಾಣಸವಾಡಿ ವ್ಯಾಪ್ತಿಯ 8ನೇ ಮುಖ್ಯರಸ್ತೆ, ಕಿಯಾ ಶೋ ರೂಂ ಹತ್ತಿರ ಪ್ರತಿನಿತ್ಯ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಇದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಈ ವಿಷಯದ ಬಗ್ಗೆ ಬಾಣಸವಾಡಿ ಸಂಚಾರ ಪೊಲೀಸ್ ಇಲಾಖೆಯೊಂದಿಗೆ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳಲು ಸಭೆಗೆ ತಿಳಿಸಿದರು.

2. ಬಾಣಸವಾಡಿ ವ್ಯಾಪ್ತಿಯ 9ನೇ ಎ ಮುಖ್ಯರಸ್ತೆ, 'ಇ' 'ಡಿ' 'ಜಿ' ರಸ್ತೆಗಳ ಇಕ್ಕೆಲಗಳಲ್ಲಿ "No Parking" ಪ್ರದೇಶಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಇದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಅಂತಹ ವಾಹನಗಳನ್ನು ಸಂಚಾರ ಪೊಲೀಸ್‌ರು ಟೋಯಿಂಗ್ ಮಾಡಿ, ಅಂತಹ ವಾಹನ ಸವಾರರಿಗೆ ಸೂಕ್ತ ದಂಡ ವಿಧಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

3. 9ನೇ ಮುಖ್ಯರಸ್ತೆ, 2ಕೆ ಕ್ರಾಸ್‌ನಲ್ಲಿ ಸುಮಾರು ದಿನಗಳಿಂದ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿರುವ ವಾಹನಗಳನ್ನು ಸದರಿ ಪ್ರದೇಶದಿಂದ ತೆರವುಗೊಳಿಸಲು ಸಂಚಾರ ಪೊಲೀಸ್ ರವರಿಗೆ ತಿಳಿಸಿ, ಕ್ರಮ ವಹಿಸಲು ಸಭೆಗೆ ತಿಳಿಸಿದರು.

4. ಬಾಣಸವಾಡಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಅನೈತಿಕ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಅಂತಹ ಸ್ಥಳಗಳನ್ನು ಗುರುತಿಸಿ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಪೊಲೀಸ್ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

5. ಬಾಣಸವಾಡಿ ಸರ್ವಿಸ್ ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದು, ಸದರಿ ಪ್ರದೇಶದಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ನಾಗರೀಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಅಂತಹ ಸ್ಥಳಗಳಲ್ಲಿ ನಿಲುಗಡೆ ಮಾಡುವ ವಾಹನಗಳನ್ನು ಸಂಚಾರ ಪೊಲೀಸ್ ಇಲಾಖೆಯವರು ಟೋಯಿಂಗ್ ಮಾಡಲು ಹಾಗೂ ಮಾಲೀಕರಿಗೆ ಸೂಕ್ತ ದಂಡ ವಿಧಿಸಲು ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

**ತೋಟಗಾರಿಕಾ ಇಲಾಖೆ:-**

1. ಬಾಣಸವಾಡಿ ವ್ಯಾಪ್ತಿಯ 5ನೇ ಬಿ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್‌ನಲ್ಲಿ ರಸ್ತೆಗೆ ಬಾಗಿಕೊಂಡಿರುವ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದಾಗ, ಈ ಬಗ್ಗೆ ಪಾಲಿಕೆಯ ತೋಟಗಾರಿಕಾ ಇಲಾಖೆಯವರಿಗೆ ಕ್ರಮ ವಹಿಸಲು ತಿಳಿಸಲಾಗುವುದೆಂದು ಸಭೆಗೆ ತಿಳಿಸಲಾಯಿತು.

2. 9ನೇ ಮುಖ್ಯರಸ್ತೆ, 2ಕೆ ಕ್ರಾಸ್‌ನಲ್ಲಿ ಕೆಲವು ಸ್ಥಳಗಳಲ್ಲಿ ಒಣಗಿರುವ ಹಾಗೂ ರಸ್ತೆಗೆ ಚಾಚಿಕೊಂಡಿರುವ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಿ, ಸದರಿ ಪ್ರದೇಶದಿಂದ ಅವುಗಳನ್ನು ವಿಲೇವಾರಿ ಮಾಡಲು ಸಭೆಗೆ ತಿಳಿಸಿದರು.

**ಆರೋಗ್ಯ ಇಲಾಖೆ:-**

1. ಬಾಣಸವಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ವ್ಯಾಕ್ಸಿನ್ ಅಭಿಯಾನ ಕೈಗೊಂಡು, ವಾರ್ಡ್‌ನಲ್ಲಿ ಎಲ್ಲಾ ನಾಗರೀಕರು ಲಸಿಕೆ ಹಾಕಿಸಿಕೊಳ್ಳುವಂತೆ ಜನಜಾಗೃತಿ ಮೂಡಿಸುತ್ತಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಲು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಲು ಸಭೆಯಲ್ಲಿ ಆರೋಗ್ಯಾಧಿಕಾರಿಗಳಿಗೆ ತಿಳಿಸಿದರು.

**ವೈಟ್ ಟ್ಯಾಪಿಂಗ್ ಹಾಗೂ ಮೇಜರ್ ರೋಡ್ ಇಲಾಖೆ:-**

1) ಬಾಣಸವಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಮಾಹೆಯಲ್ಲಿ ಕೈಗೊಳ್ಳುವ ವಾರ್ಡ್ ಕಮಿಟಿ ಸಭೆಯಲ್ಲಿ ವೈಟ್ ಟ್ಯಾಪಿಂಗ್ ಹಾಗೂ ಮೇಜರ್ ರೋಡ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು ಪ್ರಸ್ತಾಪಿಸಲಾಗುತ್ತಿದ್ದು, ಈ ದೂರುಗಳಿಗೆ ಸದರಿ ಇಲಾಖೆಯ ಅಧಿಕಾರಿ / ನೌಕರರು ಇಲ್ಲದೇ ಇರುವುದರಿಂದ ದೂರು ಹಾಗೂ ಕುಂದು ಕೊರತೆಗಳನ್ನು ನೀಗಿಸಲು ಕಷ್ಟಸಾಧ್ಯವಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ ಮುಂದಿನ ವಾರ್ಡ್ ಕಮಿಟಿ ಸಭೆಗಳಿಗೆ ವೈಟ್ ಟ್ಯಾಪಿಂಗ್ ಹಾಗೂ ಮೇಜರ್ ರೋಡ್ ವಿಭಾಗ ರವರಿಗೆ ಸಭೆಯ ತಿಳುವಳಿಕೆ ನೋಟೀಸ್‌ನ್ನು ಕಳುಹಿಸಿ, ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕ್ರಮ ವಹಿಸಲು ಸೂಚಿಸಿದರು.

**ಬೆಸ್ಕಾಂ ಇಲಾಖೆ:-**

1) ಬಾಣಸವಾಡಿ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಬೆಸ್ಕಾಂ ಇಲಾಖೆಯಿಂದ ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಹಾಕಿರುವ ಬ್ಯಾರಿಕೇಡ್‌ಗಳನ್ನು ಸ್ಥಳಾಂತರಿಸದೇ ಇರುವುದರಿಂದ ಪಾದಾಚಾರಿಗಳು ಹಾಗೂ ಸಾರ್ವಜನಿಕರು ಮುಖ್ಯರಸ್ತೆಗೆ ಬರುತ್ತಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಬೆಸ್ಕಾಂ ಇಲಾಖೆಯವರು ಕಾಮಗಾರಿ ಪೂರ್ಣಗೊಂಡ ಸ್ಥಳಗಳಿಂದ ಅನಾವಶ್ಯಕವಾಗಿ ಬಿದ್ದಿರುವ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲು ಹಾಗೂ ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಸಭೆಯ ತಿಳುವಳಿಕೆ ನೋಟೀಸ್‌ನ್ನು ಕಳುಹಿಸಿ, ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕ್ರಮ ವಹಿಸಲು ಸೂಚಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು<br>ಸಹಾಯಕ ಅಭಿಯಂತರರು<br>ವಾರ್ಡ್ ಸಂಖ್ಯೆ.27, ಬಾಣಸವಾಡಿ | ಅಧ್ಯಕ್ಷರು<br>(ನೋಡೆಲ್ ಅಧಿಕಾರಿಗಳು)<br>ವಾರ್ಡ್ ಸಂಖ್ಯೆ.27, ಬಾಣಸವಾಡಿ |

**ಪ್ರತಿಯನ್ನು:-**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.